**ಅಸಲು ದಾವಾ ನಂಃ130/2014**

**ಡಿ.ಡಬ್ಲ್ಯೂಃ 01**

**ದಿನಾಂಕಃ22.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಶ್ರೀ ಡಿ.ಜೆ.ಆರ್. ಪ್ರತಿವಾದಿ ಪರ ವಕೀಲರಿಂದ**

ನನ್ನ ಅಣ್ಣ ಬಾಲರಾಜ ರವರನ್ನು ಸರ್ವೆ ನಂಬರ್ 20 ರಲ್ಲಿ ಜಮೀನು ಮಂಜೂರು ಆಗಿರುವ ಬಗ್ಗೆ ಇಲ್ಲಿಯವರೆಗೂ ಕೇಳಿ ತಿಳಿದುಕೊಂಡಿರುವುದಿಲ್ಲ. ನನ್ನ ಅಣಣನಿಗೆ 3 ಎಕರೆ ಜಮೀನು ಮಂಜೂರಾಗಿದ್ದು ಸ್ವಾಧೀನಾನುಭವದಲ್ಲಿರುವುದು ಗೊತ್ತಿದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಅಣ್ಣನನ್ನು ಮಾತನಾಡಿಸುವುದಿಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಅಣ್ಣನೊಂದಿಗೆ ಮಾತನಾಡಿಸದೇ ಸುಮಾರು 18-20 ವರ್ಷಗಳಾಗಿರುತ್ತವೆ. ಈ ದಾವೆಯಲ್ಲಿ ನಾನು ಮತ್ತು ನನ್ನ ಅಣ್ಣ ಒಬ್ಬರೇ ವಕೀಲರನ್ನು ನೇಮಿಸಿಕೊಂಡು ಜಂಟಿಯಾಗಿ ತಕರಾರನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಈ ಪ್ರಕರಣದಲ್ಲಿ ಕೇವಲ ನಾನು ನನ್ನ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ.





ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಪರವಾಗಿ ಹಾಗೂ ಇತರೆ ಪ್ರತಿವಾದಿಯರ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇಃನೆ ಎಂದು ಬರೆಸಲಾಗಿರುತ್ತದೆ ಎಂದರೆ ಸರಿ. ಈ ದಾವೆಯಲ್ಲಿ ತಕರಾರು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ಆ ಸಮಯದಲ್ಲಿ 2 ನೇ ಪ್ರತಿವಾದಿಯು ಜೊತೆಯಲ್ಲಿ ಬಂದಿರುವುದಿಲ್ಲ. ಲಿಖಿತ ಹೇಳಿಕೆಯಲ್ಲಿ ಬಾಲರಾಜು ಎಂದು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಲಿಖಿತ ಹೇಳಿಕೆಗೆ ಸಹಿ ಮಾಡಿದ ಸಮಯದಲ್ಲಿ 2 ನೇ ಪ್ರತಿವಾದಿಯ ಬಂದಿರುವುದ್ಲಿಲ. ನಾನು ನಮ್ಮ ವಕೀಲರ ಬಳಿ ಯಾರು ಬಾಲರಾಜ ಎಂದು ಸಹಿ ಮಾಡಿರುತ್ತಾರೆ ಎಂದು ಕೇಳಿರುವುದಿಲ್ಲ.

ಸರ್ವೆ ನಂಬರ್ 37 ರ ಉತ್ತರ ದಿಕ್ಕಿಗೆ ಪ್ರಭು ಮತ್ತು ಲೋಕೇಶ್ ರವರ ಜಮೀನು ಬರುತ್ತದೆ ಎಂದರೆ ಸರಿ. ಪ್ರಭು ಮತ್ತು ಲೋಕೇಶ್ ರವರು ಅಣ್ಣ ತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ. ಮರು ದಾವಾ ಸ್ವತ್ತಿನಲ್ಲಿ ಉತ್ತರ ದಿಕ್ಕಿನಲ್ಲಿ ಯಾರ ಜಮೀನು ಬರುತ್ತದೆ ಎಂದು ಉದ್ದೇಶ ಪೂರ್ವಕವಾಗಿಯೇ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಒಂದು

ಜಮೀನನ್ನು ಗುರುತಿಸಲು ಎಲ್ಲಾ ದಿಕ್ಕುಗಳಲ್ಲಿಯೂ ಯಾರ ಜಮೀನು ಬರುತ್ತದೆ ಎಂದು ತಿಳಿಸಿದರೆ ಮಾತ್ರ ಗುರುತಿಸಲು ಅನುಕುವಾಲವಾಗುತ್ತದೆ ಎಂದರೆ ಸರಿ.

ಸಾಗುವಳಿ ಚೀಟಿಯಲ್ಲಿ ನಮೂದು ಮಾಡಿರುವ ಚಕ್ಕುಬಂದಿಯನ್ನು ಎದುರುದಾವಾ ಸ್ವತ್ತಿನಲ್ಲಿ ನಮೂದಿಸಿರುತ್ತೇವೆ ಎಂದರೆ ಸರಿ. 1963 ನೇ ಸಾಲಿನಲ್ಲಿ ನನ್ನ ತಂದೆಗೆ ಸಾಗುವಳಿ ಚೀಟಿಯನ್ನು ನೀಡಲಾಗಿರುತ್ತದೆ. 1963 ರಿಂದ ಇಲ್ಲಿಯವರೆಗೂ ಅಕ್ಕಪಕ್ಕದ ಜಮೀನಿನ ಮಾಲೀಕತ್ವ ಬದಲಾಗಿರುತ್ತದೆ ಎಂದರೆ ಆಗಿರಬಹುದು. 2014 ನೇ ಸಾಲಿನಲ್ಲಿ ನಮ್ಮ ಜಮೀನಿನ ಪಕ್ಕ ಯಾರ ಜಮೀನು ಇತ್ತು ಎಂದು ತೋರಿಸಲು ನಮಗೆ ತೊಂದರೆ ಇರಲಿಲ್ಲ ಎಂದರೆ ಸಾಗುವಳಿ ಚೀಟಿಯಲ್ಲಿ ನಮೂದಿಸಿರುವ ವ್ಯಕ್ತಿಗಳೇ ಈಗಲೂ ಸ್ವಾಧೀನದಲ್ಲಿರುತ್ತಾರೆ ಎಂದು ನುಡಿಯುತ್ತಾರೆ.

ಸರ್ವೆ ನಂಬರ್ 37 ರ ಜಮೀನಿನ ಪಹಣಿಯು ನಮ್ಮ ಹೆಸರನಲ್ಲಿ ಇರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಗೆ ಮೋಸ ಆಗಿರುತ್ತದೆ, ಆದರೆ ನಾವೇ ಸ್ವಾಧೀನದಲ್ಲಿರುತ್ತೇವೆ ಎಂದು ನುಡಿಯುತ್ತಾರೆ . ಪಹಣಿಯು ವಾದಿಯರ ಹೆಸರಿಗೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕೌಂಟರ್ ಕ್ಲೈಮ್ ಸಲ್ಲಿಸುವ ಸಮಯದಲ್ಲಿ ಸರ್ವೆ ನಂಬರ್ 37 ರ ಜಮೀನಿನ ಪಹಣಿಯು ಯಾರ ಹೆಸರಿನಲ್ಲಿ ಇತ್ತು ಎಂದು ತಿಳಿದುಕೊಂಡಿರುವುದಿಲ್ಲ. 2014 ರಿಂದ ಇಲ್ಲಿಯವರೆಗೂ ಹಾಲಿ ಸರ್ವೆ ನಂಬರ್ 37



ರ ಜಮೀನಿನ ಪಹಣಿಯು ಯಾರ ಹೆಸರಿನಲ್ಲಿ ಬರುತ್ತಿದ ಎಂದು ನಾನು ತಿಳಿದುಕೊಂಡಿರುವುದಿಲ್ಲ. ನಾನು ಸರ್ವೆ ನಂಬರ್ 37 ರ ಜಮಿನಿಗೆ ಹಕ್ಕುದಾರ, ಮಾಲೀಕ ಹಾಗೂ ಸ್ವಾಧೀನದಾರನಾಗಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ಮೋಸ ಆಗಿದ ಎಂದು ತಿಳಿದ ನಂತರ ಮೇಲ್ಮನವಿ ಪ್ರಾಧಿಕಾರಕ್ಕೆ ಮನವಿಯನ್ನು ಸಲ್ಲಿಸಿರುವುದಿಲ್ಲ.

ವಾದಿಯರಿಗೆ ಸೇರಿದ ಸ್ವತ್ತನ್ನು ಲಪಟಾಯಿಸಬೇಕು ಎಂಬ ಉದ್ದೇಶದಿಂದ ಮೋಸ ಆಗಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಯರು ಸ್ವಾಧೀನಾನುಭವದಲ್ಲಿರುವುದರಿಂದ ನಮ್ಮ ಸ್ವಾಧೀನಕ್ಕೆ ತಂಟೆ ತಕರಾರು ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.